ದಿನಾಂಕಃ 10–07–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಪಿ ಎಲ್ ಕೆ ವಕೀಲರಿಂದ,

1) ನಾನು ಪದವಿ ವ್ಯಾಸಂಗ ಮಾಡಿರುತ್ತೇನೆ. ನಾನು ವಿಧಾನಸೌಧದಲ್ಲಿ ಪ್ರಥಮ ದರ್ಜೆ ನೌಕರನಾಗಿರುತ್ತೇನೆ. ನನ್ನ ತಾಯಿಗೆ ನನ್ನನ್ನು ಸೇರಿ ಮೂರು ಜನ ಮಕ್ಕಳು. ದಾವಾ ಅನುಸೂಚಿ ಸ್ವತ್ತು ನನ್ನ ತಾಯಿಯ ತಾಯಿ ನಲ್ಲೂರಮ್ಮ ರವರಿಗೆ ಸೇರಿತ್ತು. ನಲ್ಲೂರಮ್ಮ ರವರ ಗಂಡನ ಹೆಸರು ರಂಗಶೆಟ್ಟಿ ರಂಗಶೆಟ್ಟಿ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಅವರುಗಳೆಂದರೆ, 1. ನಾಗಶೆಟ್ಟಿ 2. ಪಣಿಯಮ್ಮ, 3. ಅನಂಶಶೆಟ್ಟಿ ಮತ್ತು 4. ಸರಸ್ವತಮ್ಮ.

2) ನಲ್ಲೂರಮ್ಮ ರವರಿಗೆ ದಾವಾ ಅನುಸೂಚಿ ಸ್ವತ್ತು ಜೊತೆಗೆ ಇನ್ನೊಂದು 1 ಎಕರೆ ಜಮೀನು ಸರ್ವೇ ನಂ. 139 ರಲ್ಲಿ ಇರಬಹುದು. ರಂಗಶೆಟ್ಟಿ ರವರಿಗೆ 1 ಮನೆ ಮತ್ತು 1 ಎಕರೆ ಜಮೀನು ಇರುತ್ತದೆ. ರಂಗಶೆಟ್ಟಿ ರವರ ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲೆ ಇರುತ್ತದೆ. ಸದರಿ ವಿಭಾಗದಲ್ಲಿ ಹೆಣ್ಣು ಮಕ್ಕಳಿಗೆ ಭಾಗವನ್ನು ತೋರಿಸಿರುವುದಿಲ್ಲ. ನಾನು ನಾಗಶೆಟ್ಟಿ ರವರ ವಿರುದ್ಧ ಅಸಲು ದಾವೆ ಸಂಖ್ಯೆ 277/2021 ದಾವೆಯನ್ನು ಸಲ್ಲಿಸಿರುತ್ತೇನೆ. ನಾಗಶೆಟ್ಟಿ ರವರು ವಾದಿಯರ ವಿರುದ್ಧ ವಿಭಾಗ ಕೋರಿ ಅಸಲು ದಾವೆ ಸಂಖ್ಯೆ 289/2020 ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ನಾಗಶೆಟ್ಟಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

3) 1 ನೇ ಪ್ರತಿವಾದಿ ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾರೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಪತ್ರದಲ್ಲಿ ನೋಡಿದಾಗ ಲಕ್ಕೇಗೌಡ ಎಂದು ಇತ್ತು. 1 ನೇ ಪ್ರತಿವಾದಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಾತನ ಹೆಸರು ಕೆಂಪೇಗೌಡ ಎಂದರೆ ನನಗೆ ಗೊತ್ತಿಲ್ಲ.

4) ಈ ದಾವೆಯನ್ನು ಸರ್ವೇ 547/1 ರಲ್ಲಿ 1 ಎಕರೆ ಮತ್ತು 552 ರಲ್ಲಿ 24 ಗುಂಟೆ ವಿಸ್ತೀರ್ಣಕ್ಕೆ ಸಲ್ಲಿಸಿರುತ್ತಾರೆ. ಈ ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸರ್ವೆ ನಂಬರ ತಪ್ಪಾಗಿದೆ ಎಂದು ಗೊತ್ತಾಗಿರುತ್ತದೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ- ರಾಮೇಗೌಡರ ರವರ ಜಮೀನು, ಪಶ್ಚಿಮಕ್ಕೆ - ನನ್ನ ತಾತ ರಂಗಶೆಟ್ಟಿ ರವರ ಜಮೀನು ಉತ್ತರಕ್ಕೆ - ಎಂ ವಾಯ್ ರಾಮೇಗೌಡ ರವರ ಜಮೀನು ದಕ್ಷಿಣಕ್ಕೆ ಪಚ್ಚಮ ಮತ್ತು ರತ್ನಮ್ಮ ರವರ ಜಮೀನು ಇರುತ್ತದೆ.

5) ದಾವಾ ಸ್ವತ್ತು ಮೂಲತಹ ಅಕ್ಕಮ್ಮ ರವರಿಗೆ ಸೇರಿತ್ತು. ಅಕ್ಕಮ್ಮ ರವರಿಂದ ವೆಂಕಟರಾಮಶೆಟ್ಟಿ 1970 ನೇ ಸಾಲಿನಲ್ಲಿ ಕ್ರಯ ಪತ್ರದ ಮೂಲ ನೋಂದಣಿ ಆಗಿರುತ್ತದೆ. ವೆಂಕಟರಾಮಶೆಟ್ಟಿ ರವರಿಂದ ಒಂದು ವಾರದ ಅವಧಿಯಲ್ಲಿ ಲಕ್ಕೇಗೌಡ ರವರಿಗೆ ಕ್ರಯ ಪತ್ರ ಆಗಿರುತ್ತದೆ. ಲಕ್ಕೇಗೌಡ ರವರು ನಲ್ಲೂರಮ್ಮ ರವರಿಗೆ 1973 ನೇ ಸಾಲಿನಲ್ಲಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ನನ್ನ ವಾದ ಪತ್ರದ 2 ನೇ ಖಂಡಿಕೆಯಲ್ಲಿ 1971 ಎಂದು ಕೈ ತಪ್ಪಿನಿಂದ ಆಗಿರುತ್ತದೆ.

6) ದಾವಾ ಸ್ವತ್ತಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಗಳು ವೆಂಕಟರಾಮಶೆಟ್ಟಿ ರವರ ಹೆಸರಿನಲ್ಲಿ ನಮೂದಾಗಿರುವುದಿಲ್ಲ. ಅದೇ ರೀತಿ ಲಕ್ಕೇಗೌಡ ರವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ನಮೂದಾಗಿರುವುದಿಲ್ಲ. ಅದೇ ರೀತಿ ನಲ್ಲೂರಮ್ಮ ರವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ನಮೂದಾಗಿರುವುದಿಲ್ಲ. ವಾದಿಗಳು ದಾವಾ ಸ್ವತ್ತಿಗೆ ಕಂದಾಯ ಪಾವತಿ ಮಾಡಿರುತ್ತಾರೆ. ಕಂದಾಯ ಪಾವತಿ ಮಾಡಿದ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

7) ಅಕ್ಕಮ್ಮ ರವರಿಗೆ ದಾವಾ ಸ್ವತ್ತು ಮೊದಲಿಗೆ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಅಕ್ಕಮ್ಮ ರವರ ಹೆಸರಿನಲ್ಲಿ ಕಂದಾಯ ದಾಖಲೆಗಳು ಇರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

8) ದಾವಾ ಸರ್ವೆ ನಂ. 547/1 ಎ ಆಸ್ತಿ ಮೂಲತಹ ಗುಜ್ಜೇಗೌಡ ರವರಿಗೆ ಸೇರಿತ್ತು ಎಂದರೆ ಸರಿ. ಗುಜ್ಜೇಗೌಡ ರವರಿಂದ ಕೆಂಪೆಗೌಡ ರವರಿಗೆ ಬಂದಿರುತ್ತದೆ ಎಂದರೆ ಸರಿ. ದಿನಾಂಕ 25/01/1963 ರಂದು ಕಂಪೇಗೌಡ ರವರ ಮಕ್ಕಳಾದ ಲಕ್ಷ್ಮೇಗೌಡ, ರಾಮೇಗೌಡ ಮತ್ತು ಕೃಷ್ಣೇಗೌಡ ನೋಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸದರಿ ವಿಭಾಗದಲ್ಲಿ 1 ನೇ ಪ್ರತಿವಾದಿಯ ಲಕ್ಷ್ಮೇಗೌಡ ರವರ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿಯು ಲಕ್ಷ್ಮೇಗೌಡ ರವರ ಹೆಂಡತಿ ಅಕ್ಕಯಮ್ಮ ರವರಿಗೆ ವಿಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

9) ದಿನಾಂಕ 03/05/1972 ರಂದು ಆದ ನೋದಾಯಿತ ವಿಭಾಗ ಪತ್ರದಡಿಯಲ್ಲಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಹ ಕಾಳಾ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಕಾಳ ರವರಿಂದ ಗುಜ್ಜೇಗೌಡ ರವರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆ ಪ್ರತಿವಾದಿ 2 ರಿಂದ 9 ರವರ ಹೆಸರಿನಲ್ಲಿ ನಮೂದಾಗಿರುವ ಕಾರಣ 1 ನೇ ಪ್ರತಿವಾದಿ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ವಾದಿಯರು ಪಕ್ಷಗಾರರಾಗಿ ಸೇರಿಕೊಂಡಿರುತ್ತೇವೆ ಎಂದರೆ ಸರಿ.

10) ನಿಪಿ-05 ದಾಖಲೆಯಲ್ಲಿ ದಾವಾ ಸರ್ವೆ ನಂಬರ ನಮೂದಾಗಿರುವುದಿಲ್ಲ. ಸದರಿ ದಾಖಲೆಯಲ್ಲಿ ಸರ್ವೆ ನಂಬರ ತಪ್ಪಾಗಿ ನಮೂದಾಗಿರುತ್ತದೆ. ನಿಪಿ-06 ಮತ್ತು 07 ಪಹಣಿ ಪತ್ರಿಕೆಯಲ್ಲಿ ನಲ್ಲೂರಮ್ಮ ರವರ ಹೆಸರು ನಮೂದಾಗಿರುವುದಿಲ್ಲ. ನಿಪಿ-17 ಇಂಡೆಕ್ಸ್ ಆಪ್ ಲ್ಯಾಂಡ ದಾಖಲೆಯಲ್ಲಿ ನಮೂದಾಗಿರುವ ಕೆಂಪಯ್ಯ ಬಿನ್ ಗುಜ್ಜಯ್ಯ 1 ನೇ ಪ್ರತಿವಾದಿಯ ತಾತ ಎಂದರೆ ಸರಿ. ನಿಪಿ-18 ದಾಖಲೆಯಲ್ಲಿ ನಮೂದಾಗಿರುವ ಎಂ ಎಲ್ ಲಕ್ಷ್ಮೇಗೌಡ 1 ನೇ ಪ್ರತಿವಾದಿಯ ತಂದೆ ಎಂದರೆ ಸರಿ.

11) ನಾನು ವಿಧಾನಸೌಧದಲ್ಲಿ ಕರ್ತವ್ಯ ನಿರ್ವಹಿಸುತ್ತಿದದು, ಅಧಿಕಾರಿಗಳ ಪ್ರಭಾವ ಬೀರಿ ನಿಪಿ–23 ಮತ್ತು 25 ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿಯರು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಆರೋಗ್ಯವಾಗಿರುವುದಿಲ್ಲ. ಆದರೆ ಓಡಾಡಲು ತೊಂದರೆ ಇರುವುದಿಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ನಿಜಾಂಶ ಗೊತ್ತಾಗುತ್ತೆ ಎಂದು ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರಿಂದ 4 ಕ್ರಯ ಪತ್ರಗಳನ್ನು ಪ್ರತಿವಾದಿಯ ಆಸ್ತಿಯನ್ನು ಹೊಡಿಯಲು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ